ಅನುಕೂಲ ಮಾಡಲು ಪ್ರಯತ್ನ ಮಾಡಿದರೂ ಸಹ ಅದು ಯಶಸ್ವಿಯಾಗಿಲ್ಲ. ಆದಕ್ಕೋಸ್ಕರ ರೈತರಿಗೆ ಪಾಸ್ ಬುಕ್ ಕೊಡಲು ವ್ಯವಸ್ಥೆ ಮಾಡುತ್ತಿದ್ದೇವೆ. ಅದನ್ನು ತಮಗೂ ಕೊಡುತ್ತೇವೆ ಮತ್ತು ಲೈಬ್ರರಿಯಲ್ಲಿಯೂ ಇಡುತ್ತೇವೆ. ನಂತರ ತಾವು ಅದರ ಬಗ್ಗೆ ಸೂಚನೆಗಳನ್ನು ಕೊಡಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ — ಈ ಗ್ರಾಮಲೆಕ್ಕಿಗರು ರೈತರಿಗೆ ಸಿಗದೆ ಸಕಾಲದಲ್ಲಿ ರೆಕಾರ್ಡ್ ಆಫ್ ರೈಟ್ಸ್ ರೈತರಿಗೆ ಸಿಗುತ್ತಿಲ್ಲವೆಂಬುದು ಮತ್ತು ಇದರಿಂದ ರೈತರಿಗೆ ಕಷ್ಟವಾಗಿದೆ ಎಂಬುದು ಸರ್ಕಾರಕ್ಕೂ ಗೊತ್ತಿದೆ. ಈ ಹಿಂದಿನ ಸರ್ಕಾರದವರು ರೈತರ ಮನೆ ಬಾಗಿಲಿಗೆ ಈ ರೆಕಾರ್ಡ್‌ಗಳನ್ನು ಒದಗಿಸಿಲ್ಲ,

ಶ್ರೀ ಎಚ್.ಡಿ. ಚೌಡಯ್ಯ — ಹಿಂದಿನ ಸರ್ಕಾರ ಒದಗಿಸಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ — ನಮ್ಮ ಭಾಗದಲ್ಲಿ ಕೊಟ್ಟಿಲ್ಲ ಮಾನ್ಯ ಚೌಡಯ್ಯನವರಿಗೇನಾದರೂ ಕೊಟ್ಟಿರಬಹುದು. ಈ ಬಗ್ಗೆ ನಮ್ಮ ಸರ್ಕಾರ ಶ್ರೀ ವಿ.ಕೆ ಆರ್.ವಿ. ರಾವ್ ಅವರ ಸಂಸ್ಥೆಯ ಸಲಹೆ ಮೇರೆಗೆ ಮೊದಲು ಗುಲ್ಬರ್ಗ ಜಿಲ್ಲೆಯಲ್ಲಿ ಇದನ್ನು ಕಂಪ್ಯೂಟರೈಜ್ ಮಾಡಿ ರೈತರಿಗೆ ಎಷ್ಟು ಕಾಪಿಗಳು ಬೇಕೋ ಅಷ್ಟು ಸುಲಭವಾಗಿ ಸಿಗುವಂತಹ ವ್ಯವಸ್ಥೆ ಮಾಡಲು ವಿಚಾರ ಮಾಡುತ್ತಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಇದು ಯಶಸ್ವಿಯಾದರೆ ಈ ಒಂದು ಸಮಸ್ಯೆಗೆ ಸೂಕ್ತವಾದ ಪರಿಹಾರ ಸಿಗುತ್ತದೆಂದು ಹೇಳುತ್ತೇನೆ.

ಶ್ರೀ ಸಿ. ಬೈರೆಗೌಡ — ಈ ಗ್ರಾಮ ಲೆಕ್ಕಿಗರಿಗೆ ಹಳ್ಳಿಗಳಲ್ಲಿ ವಸತಿ ಸೌಕರ್ಯವಿದ್ದರೂ ಸಹ ಅಲ್ಲಿ ವಾಸ ಮಾಡುತ್ತಿಲ್ಲ. ಇಂತಹವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇವರು ಹಳ್ಳಿಗಳಲ್ಲಿ ವಾಸ ಇಲ್ಲದಿದ್ದರೆ ಸಂಬಂಧಪಟ್ಟ ತಹಶೀಲ್‌ದಾರರೂ ಸಹ ಇದಕ್ಕೆ ಜವಾಬ್ದಾರರಾಗುತ್ತಾರೆ. ಆದ್ದರಿಂದ ಇಂತಹ ತಹಶೀಲ್‌ದಾರರ ಮೇಲೂ ಸಹ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ವಿ.ಎಲ್. ಪಾಟೀಲ್ — ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ. ನಾವು ಬಿಗಿಯಾದ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಸರ್ಕ್ಯುಲರ್‌ಗಳನ್ನು ಕಳುಹಿಸುತ್ತಿದ್ದೇವೆ. ಎಲ್ಲವನ್ನೂ ಸರಿಪಡಿಸಲು ಸ್ವಲ್ಪ ಕಾಲಾವಧಿ ಬೇಕಾಗುತ್ತದೆ.

ಭಾಲ್ಕಿಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪೂರ್ಣಗೊಳಿಸುವುದು.

ಪ್ರಶ್ನೆ : 27(27) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ) — ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಪ್ರತಿವರ್ಷ ಮಾರ್ಚಿ ತಿಂಗಳಿಂದ ಜೂನ್ ತಿಂಗಳವರೆಗೆ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

(ಆ) ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆ ಉಂಟಾದ್ದರಿಂದಲೇ ಅಲ್ಲವೇ ರಾಜ್ಯ ಸರ್ಕಾರದವರು ಕುಡಿಯುವ ನೀರಿನ ಅಂದಾಜು 44 ಲಕ್ಷ ರೂಗಳಿಗೆ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ತಿಳಿಸಲಾಯಿತು ಹಾಗಾದರೆ ಸರ್ಕಾರವು ಯೋಜನೆಯನ್ನು ಯಾವ ದಿನಾಂಕದಲ್ಲಿ ಮಂಜೂರು ಮಾಡಲಾಯಿತು?

ಉತ್ತರ : ಶ್ರೀ ಎಂ ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).— (ಅ) ಹೌದು.

(ಆ) ಹೌದು. ಈ ಯೋಜನೆಗೆ ಸರ್ಕಾರ 44.00 ಲಕ್ಷ ರೂ.ಗಳಿಗೆ ದಿನಾಂಕ 17-11-81ರಂದು ಆಡಳಿತ ಮಂಜೂರಾತಿ ನೀಡಿರುತ್ತೆ.

ಶ್ರೀ ಭೀಮಣ್ಣ ಖಂಡ್ರೆ — ಇದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಿಂದಲೂ ಸಹ ಈ ಭಾಲ್ಕಿ ಟೌನ್‌ನಲ್ಲಿ ಮಾರ್ಚಿ ತಿಂಗಳಿನಿಂದ ಜೂನ್ ತಿಂಗಳವರೆಗೆ ಕುಡಿಯುವ ನೀರಿನ ಅಭಾವವಿರುವುದರಿಂದ ಸರ್ಕಾರದವರು ನೀರನ್ನು ಒದಗಿಸಲು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗ ಟೌನ್‌ಗೆ ನೀರನ್ನು ಒದಗಿಸುವ ಯೋಜನೆಗೆ ತಾ॥ 17-11-1981ರಂದು ಆಡಳಿತ ಮತ್ತು ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದರೂ ಸಹ ಇಲ್ಲಿಯವರೆಗೆ ಕೆಲಸ ಪ್ರಾರಂಭವಾಗದಿರಲು ಕಾರಣವೇನು?

ಶ್ರೀ ಎಂ. ಚಂದ್ರಶೇಖರ್ — ಈ ವರ್ಷ ಇದಕ್ಕೆ 13.70ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಜುಲೈ ತಿಂಗಳವರೆಗೆ 1.83ಲಕ್ಷ ರೂಪಾಯಿಗಳು ಖರ್ಚಾಗಿದೆ. ಈಗಾಗಲೇ ನಾವು ಕ್ಯಾಸ್ಟ್-ಐರನ್ ಪೈಪ್ಸ್‌ಗೆ ಆರ್ಡರ್ ಪ್ಲೇಸ್ ಮಾಡಿದ್ದೇವೆ. ಎಲೆವೇಟೆಡ್ ರಿಜರ್‌ವಾಯರ್ ಕೆಲಸಕ್ಕೆ ಟೆಂಡರ್ ಕರೆದಿದ್ದೇವೆ. ಬರಾಜ್ ಮತ್ತು ಲೈನಿಂಗ್ ಆಫ್ ಪೈಪ್ಸ್ ಕೆಲಸ ಈ ತಿಂಗಳಲ್ಲಿ ಪ್ರಾರಂಭವಾಗುತ್ತದೆ.

ಶ್ರೀ ಭೀಮಣ್ಣ ಖಂಡ್ರೆ —ಈ ವರ್ಷವೇ ಈ ಕೆಲಸವನ್ನು ಮುಗಿಸುವ ಆಶ್ವಾಸನೆ ಕೊಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್ — ಈ ವರ್ಷಕ್ಕೆ 13,70ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇದು 44ಲಕ್ಷರೂ.ಗಳ ಯೋಜನೆಯಾದ ಕಾರಣ ಈ ವರ್ಷ ಮುಗಿಯುವುದಿಲ್ಲವೆಂಬುದು ತಮಗೂ ಗೊತ್ತಾಗುತ್ತದೆ,

ಶ್ರೀ ಭೀಮಣ್ಣ ಖಂಡ್ರೆ.— ಹಾಗಿದ್ದರೆ ಎರಡು ವರ್ಷಗಳಲ್ಲಿಯಾದರೂ ಇದನ್ನು ಮುಗಿಸುತ್ತೀರಾ?

ಶ್ರೀ ಎಂ. ಚಂದ್ರಶೇಖರ್.— ಎಲ್ಲ ಕಡೆಗೂ ಕುಡಿಯುವ ನೀರನ್ನು ಒದಗಿಸಬೇಕೆಂಬುದೇ ನಮ್ಮ ಸರ್ಕಾರದ ನೀತಿಯಾಗಿದೆ. ಆದ್ದರಿಂದ ಆದಷ್ಟೂ ಬೇಗ ಇದನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ

ವಿಷಯ : ಮಾಲೂರು ತಾಲ್ಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಕಾರ್ಯಕಾರಿ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ವಿಚಾರ.

ಪ್ರಶ್ನೆ : 28(29) ಶ್ರೀ ಎ. ನಾಗರಾಜು (ಮಾಲೂರು).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ : —

(ಅ) ಮಾಲೂರು ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕಿನ ಕಾರ್ಯಕಾರಿ ಮಂಡಲಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನು ನೇಮಿಸಿ ಮೂರು ವರ್ಷಗಳ ಅವಧಿ ಮುಗಿದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ;

(ಆ) ರದ್ದಾದ ಕಾರ್ಯಕಾರಿ ಸಮಿತಿಯ ವಿರುದ್ಧ 24 ದೂರುಗಳನ್ನು ಮಾಡಿರುವುದು ನಿಜವೇ;

(ಇ) ಹಾಗಿದ್ದಲ್ಲಿ ಆ ದೂರುಗಳು ಯಾವುವು;

(ಈ) ಈ ದೂರುಗಳ ಬಗ್ಗೆ ಸರಕಾರದವರು ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಉತ್ತರ : ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).— (ಅ) ಹೌದು. (ಆ) ಹೌದು.

(ಇ) ವಿವರಗಳು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿದೆ.

(ಈ) ಈ ದೂರುಗಳನ್ನು ಸರಿಪಡಿಸುವ ಉದ್ದೇಶದಿಂದ ಸಹಕಾರ ಸಂಘಗಳ ಕಾಯಿದೆ ಕಲಂ 31ರ ಮೇರೆಗೆ ಈ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಪಡಿಸಲಾಯಿತು. ಮತ್ತು ದಿನಾಂಕ 21-3-80ರಿಂದ ಸರಕಾರದ ವತಿಯಿಂದ ಆಡಳಿತಾಧಿಕಾರಿಯವರನ್ನು ನೇಮಿಸಲಾಯಿತು.

ಸಂಬಂಧಪಟ್ಟ ವಿವರಗಳ ಅನುಬಂಧ

ದೂರುಗಳ ವಿವರಣೆ ಕೆಳಗಿನಂತೆ ಇದೆ.

1) ಷೇರು ಹಣವನ್ನು ಸಂಬಂಧಪಟ್ಟ ಸಾಲಗಾರರ ಸಾಲದ ಖಾತೆಗೆ ಹೊಂದಾಣಿಕೆ ಅಥವಾ ಹಿಂತಿರುಗಿಸಿರುವುದು.

2) ಬೈಲಾ ಕ್ರಮ ಸಂಖ್ಯೆ 10ನ್ನು ಉಲ್ಲಂಘಿಸಿ 'ಎ' ವರ್ಗದ ಸದಸ್ಯರಿಗೆ ಷೇರು ಹಣವನ್ನು ವಾಪಸ್ಸು ಮಾಡಿರುವುದು

3) ಸದಸ್ಯರನ್ನು ನೇಮಿಸುಕೊಳ್ಳುವಾಗ ನಡೆದಿರುವ ನ್ಯೂನತೆಗಳು.

4) ಕರ್ನಾಟಕ ರಾಜ್ಯ ಸಹಕಾರ ಭೂ ಅಭಿವೃದ್ಧಿ ಬ್ಯಾಂಕಿಗೆ ಗ್ರಾಮಾಂತರ ಡಿಬೆಂಚರ್ ಹಣವನ್ನು ವಾಪಸ್ಸು ಕಟ್ಟದಿರುವುದು ಮತ್ತು ಆ ಹಣವನ್ನು ಬ್ಯಾಂಕಿನ ವ್ಯವಹಾರದಲ್ಲಿ ಉಪಯೋಗಿಸಿಕೊಂಡಿರುವುದರ ಬಗ್ಗೆ.

5) ಸದಸ್ಯರಿಂದ ಬಾಕಿ ನಿಂತಿರುವ ಸಾಲದ ಹಣವನ್ನು ವಸೂಲಾತಿ ಮಾಡುವಲ್ಲಿ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳದಿರುವುದು.

6) ಜೀತ ಪದ್ಧತಿಯಿಂದ ವಿಮುಕ್ತರಾದವರನ್ನು ಸದಸ್ಯರಾಗಿ ತೆಗೆದುಕೊಳ್ಳದಿರುವುದು ಮತ್ತು ಸಾಲ ಮಂಜೂರು ಮಾಡದೇ ಇರುವುದು. 751 ಜನ ಹರಿಜನ ಸದಸ್ಯರ ಪೈಕಿ ಕೇವಲ 137 ಜನ ಸದಸ್ಯರಿಗೆ ಮಾತ್ರ ಸಾಲ ಮಂಜೂರು ಮಾಡಿರುವುದು.

7) ಬಾಕಿ ನಿಂತಿರುವ ಹಣ ರೂ. 39019-54 ಸಸ್ಪೆನ್ಸ್ ಅಸೆಟ್ಸ್ (ಅಮಾನತ್ತು ಆಸ್ತಿ) ಯನ್ನು ವಸೂಲಿ ಮಾಡದಿರುವುದು.

8) ಸಾಲಾ ಖೈರು 30-6-76ಕ್ಕೆ ರೂ. 155212-58 ನಿವ್ವಳ ನಷ್ಟವಾಗಿರುವುದು.

9) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 59ರ ಕಲಂ 27ರಲ್ಲಿ ನಿಗದಿಪಡಿಸಿರುವ ಕಾಲಾವಧಿಯಲ್ಲಿ ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ನಡೆಸದೆ ಇರುವುದು.

10) ಇಲಾಖೆಯ ಅನುಮತಿ ಪಡೆಯದೆ 74-75 ಮತ್ತು 75-76ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಗಳನ್ನು ವಿಳಂಬವಾಗಿ ನಡೆಸಿರುವುದು.

11) ಬೈಲಾ ನಂ. 28ನ್ನು ಉಲ್ಲಂಘಿಸಿ ಆಡಳಿತ ಮಂಡಳಿಯ ಸದಸ್ಯರು ಹೆಚ್ಚುವರಿ ಸಿಟ್ಟಿಂಗ್ ಫೀ ರೂ 5-00 ರಂತೆ ತೆಗೆದುಕೊಂಡಿರುವುದು.

12) ದ್ರಾಕ್ಷಿ ಸಾಲ ಮಂಜೂರಾತಿ ಯೋಜನೆಯಲ್ಲಿ ಇದು ಪ್ರಕರಣಗಳಲ್ಲಿ ದುರ್ವಿನಿಯೋಗವಾಗಿರುವುದು ಮತ್ತು ಅವುಗಳನ್ನು ವಾಪಸ್ಸು ಪಡೆಯದೇ ಇರುವುದು.

13) ಬೈಲಾ ನಂ. 73ನ್ನು ಉಲ್ಲಂಘಿಸಿ ಬ್ಯಾಂಕಿನ ಅಧ್ಯಕ್ಷರು ರೂ. 1500-00 ಗಳನ್ನು ಪ್ರವಾಸ ಭತ್ಯೆ ಮುಂಗಡವಾಗಿ ಸ್ವೀಕರಿಸಿರುವುದು.